ಮಾಡಂತ್ತಿದ್ದಾರೆಯೇ ಎನ್ನುವ ಬಗ್ಗೆ ತಿಳಿಸಬೇಕಂ. ಏತಕ್ಕೆಂದರೆ, ಮಾನ್ಯ ಅಧ್ಯಕ್ಷಣಿಯವರೆ ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳಿದರೆ ತಪ್ಪಾಗಲಿಕ್ಕೆ ಇಲ್ಲ, ಮೊನ್ನೆ ಪ್ರಜಾವಾಣಿ ಪತ್ರಿಕೆಯಲ್ಲಿ, ವಾಚಕರ ವಾಣಿಯಲ್ಲಿ ಒಬ್ಬರು ಬರೆದಿದ್ದಾರೆ, ಸರ್ಕಾರ ಕಳೆದ ೪ ತಿಂಗಳುಗಳಿಂದ ೯ ಸಾರಿ ನೀರನ್ನು ನಿಲ್ಲಿಸಿದೆ ಎಂದು ರಿಪೋರ್ಟ್ ಆಗಿದೆ. ಈ ಯೋಜನೆ ಕಾರ್ಯಗತವಾಗಿ ೪ ತಿಂಗಳುಗಳಾ ಆಗಿಲ್ಲ ಆಗಲೇ ೯ ಸಾರಿ ನಿಲ್ಲಿಸಿದ್ದಾರೆಂದು ವರದಿಯಾಗಿದೆ How defective the execution has been done. ಎನ್ನತಕ್ಕಂಥದ್ದು ಇದು ಒಂದೇ ಒಂದು ಉದಾಹರಣೆಯಿಂದ ಅರ್ಥವಾಗುತ್ತದೆ ಆದುದರಿಂದ ದಯವಿಟ್ಟು ಸರ್ಕಾರದವರು ಮುಂಜಾಗ್ರತೆಯಿಂದ ಇನ್ನು ಮುಂದೆ ಅನಾಹುತವಾಗದಂತೆ ನೋಡಿಕೊಳ್ಳಿ

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀರು ಸರಬರಾಜು ಮಾಡುವುದು ಒಂದೂ ಸಿಸ್ಟಂ ಇರುತ್ತದೆ ಇರತಕ್ಕಂಥ ಪ್ರಶ್ನೆ ನೀರು ಬೇಕು ಎನ್ನುವುದು. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಎಷ್ಟು ಕಾಳಜಿರತೆಯಿದೆ ಮತ್ತು ಜವಾಬ್ದಾರಿಯಿದೆ ಅಷ್ಟೇ ಜವಾಬ್ದಾರಿ ನಮಗೆ ಜವಾಬ್ದಾರಿ ಹೊತ್ತಿರತಕ್ಕಂಥವರಿಗೆ ಇದೆ. ಇದಕ್ಕೆ ಎಷ್ಟು ಮಿನಿಮಮ್ ಟೈಮ್ ಬೇಕೋ ಅಷ್ಟರಲ್ಲಿ ಇದನ್ನು ಕಾರ್ಯಗತಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಒಂದೇ ಸರಿ ಜಂಪ್ ಮಾಡಿ ಪಿಲ್ಲರಿನಿಂದ ಪೋಸ್ಟ್‌ಗೆ ಪೋಸ್ಟ್‌ನಿಂದ ಪಿಲ್ಲರ್‌ಗೆ ಹೋಗುತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಚನ್ನಬಸಪ್ಪನವರು ಹಿಂದೆ ಮಂತ್ರಿಯಾಗಿದ್ದಾಗ ಆಕ್ಟ್ ಮಾಡುವುದಕ್ಕೂ ಈಗ ಮಂತ್ರಿಗಳಾಗಿ ಆಕ್ಟ್ ಮಾಡುವುದಕ್ಕೂ ವ್ಯತ್ಯಾಸ ಇದೆ.

SRI H. M. CHANNABASAPPA.—We will take the minimum time and see that water is supplied.

Matter under Rule 312

(i) re : Affairs of P.S. to the Minister for Agriculture and Animal Husbandry

ಶ್ರೀ ಎಸ್. ಬಂಗಾರಪ್ಪ (ಸೊರಬ) —ಮಾನ್ಯ ಸಭಾಧ್ಯಕ್ಷರೇ, ನಾನು ಮತ್ತು ಮಾನ್ಯ ಸ್ನೇಹಿತರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಒಂದು ನೋಟೀಸನ್ನು ೩೧೨ರ ಪ್ರಕಾರ ತಮ್ಮ ಹತ್ತಿರ ಕಳುಹಿಸಿಕೊಟ್ಟಿದ್ದೇವೆ ಅದು ವಿಷಯ ಏನು ಎಂದರೆ ಮಾನ್ಯ ಮಂತ್ರಿಗಳಾದ ಶ್ರೀ ಚಿಕ್ಕೇಗೌಡರ ಆಪ್ತ ಕಾರ್ಯದರ್ಶಿ ಶ್ರೀ ರಂಗಸ್ವಾಮಿ ಎಂದು ಇದ್ದಾರೆ ಅವರ ಮನೆ ಹನುಮಂತನಗರದ ಪೋಲೀಸ್ ಸ್ಟೇಷನ್‌ಗೆ ಸೇರಿದ ವ್ಯಾಪ್ತಿಯಲ್ಲಿ ಬರುತ್ತದೆ. ಅವರ ಮನೆಯಲ್ಲಿ ಒಂದು ಭಾಗವನ್ನು ಯಾರೋ ಒಬ್ಬರು ಸುರೇಶ್ ಶೆಟ್ಟಿ ಎಂಬುವರಿಗೆ ಬಾಡಿಗೆಗೆ ಕೊಟ್ಟಿದ್ದಾರೆ... ಅವರಿಗೂ ಇವರಿಗೂ ಏನೋ ಸ್ವಲ್ಪ .....

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ಹೇಳುತ್ತಿರುವ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಸಭೆಯಲ್ಲಿ ಮುಖ್ಯಮಂತ್ರಿಗಳು ಇಲ್ಲ, ಯಾರು ಅವರಿಗೆ ಉತ್ತರ ಕೊಡಬೇಕು ? ಜೊತೆಗೆ ಅವರು ಕಳುಹಿಸಿರುವ ನೋಟೀಸನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿಲ್ಲ. ಅಸೆಂಬ್ಲಿ ಸೇರುವ ಮೊದಲು ಮೂರು ನಿಮಿಷಗಳು ಇದ್ದಾಗ ಅವರು ನೋಟೀಸ್ ಕಳುಹಿಸಿರುವುದು.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಉದ್ದೇಶವಾದರೂ ಇಷ್ಟೆ. ಇವತ್ತು ಸಭೆಯು ಮುಗಿದು ಮೂರು-ನಾಲ್ಕು ದಿವಸ ರಜಾ ಬರುತ್ತದೆ ಆದ್ದರಿಂದ ಈ ವಿಷಯವನ್ನು ಎತ್ತಿದ್ದೇವೆ. ಜೊತೆಗೆ ನಮ್ಮ ಬಾಡಿಗೆ ವಿಷಯ ಅದು ಕೇವಲ ಸಿವಿಲ್ ಡಿಸ್‌ಪ್ಯೂಟ್ ಅದರ ಬಗ್ಗೆ ನಾನು ಪ್ರಸ್ತಾಪಮಾಡುವುದಕ್ಕೆ ಹೋಗುವುದಿಲ್ಲ ನಾನು ತಿಳಿಸುವುದು ಇಷ್ಟೆ ಯಾರು ಸುರೇಶ್ ಶೆಟ್ಟಿ ಇದ್ದಾರೆ ಅವರ ಪರವಾಗಿ ಪೋಲೀಸ್ ಡೆಪ್ಯುಟಿ ಕಮಿಷನರ್ ಟ್ರಾಫಿಕ್ ಬೆಂಗಳೂರು ಏತಕ್ಕೋಸ್ಕರ ಈ ಸುರೇಶ್ ಶೆಟ್ಟಿ ಎಂಬುವರಿಗೆ ಆಕ್ಟೀವ್ ಸಪೋರ್ಟ್ ಮಾಡುತ್ತಿದ್ದಾರೆ ? ಜೊತೆಗೆ ರಂಗಸ್ವಾಮಿಯವರಿಗೆ ಸುಮ್ಮನೆ ಕಿರುಕುಳ ಕೊಡುತ್ತಿದ್ದಾರೆ. ಇದರ ಬಗ್ಗೆ ಅವರು ನನ್ನ ಜೊತೆಯಲ್ಲಿ ಹೆಚ್ಚಾಗಿ ಪ್ರಸ್ತಾಪಮಾಡಲಿಲ್ಲ. ಇದು ಬಹಳ ಹಿಂದೆಯೇ ನನ್ನ ಗಮನಕ್ಕೆ ಬಂದಿತ್ತು. ಏತಕ್ಕೆಂದರೆ ಈ ವಿಷಯವನ್ನು ಅವರು ಪಾಪ ಮಂತ್ರಿಗಳಿಗೂ ಹೇಳಿಕೊಳ್ಳುವುದಕ್ಕೆ ಅಂಜಿ ತಿಳಿಸಿಲ್ಲ ಇವರು ಮಂತ್ರಿಗಳ ಹತ್ತಿರ ಕೆಲಸಮಾಡುವುದರಿಂದ ಅಂಜಿಕೊಂಡು ಹೋಗಿದ್ದು ತಪ್ಪೆ ? ಅದಕ್ಕೋಸ್ಕರ ನಾನು, ಇದು ಯಾವ ನ್ಯಾಯ, ಇದಕ್ಕೂ ಮತ್ತು ಟ್ರಾಫಿಕ್ ಪೋಲೀಸ್ ಡೆಪ್ಯುಟಿ

ಕಮಿಷನರ್‌ಗೂ ಏನು ಸಂಬಂಧವಿದೆ ? ಇದೂ ವಿಚಾರವನ್ನು ತಮ್ಮ ಮೂಲಕ ಸರ್ಕಾರದವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಅವರ ಜೀವಕ್ಕೆ ಅಪಾಯ ಇದೆಯೆಂದು ತಿಳಿದು ಬಂದಿದೆ ಅದಕ್ಕೆ ಕೂಡಲೇ ಸೂಕ್ತ ಕ್ರಮ ತೆಗೆದುಕೊಂಡು ಸೂಕ್ತ ರಕ್ಷಣೆ ಕೊಟ್ಟರೆ ಒಳ್ಳೆಯದು. ಇನ್ನು ಬಹಳ ದಿವಸಗಳ ಹಿಂದೆ ತಿಳಿದು ಬಂದಿದ್ದರೂ ಕೂಡ ನಾವು ಕೇಳಿ ಕೇಳಿ ಸುಮ್ಮನೆ ಇದ್ದೆವು. ಇದರಲ್ಲಿ ಏನಾಗಿದೆ ಎಂದರೆ ಲಾ ಅಂಡ್ ಆರ್ಡರ್‌ಗೆ ಸಂಬಂಧ ಪಟ್ಟವರಿಗೂ ಮತ್ತು ಈ ಕೇಸಿಗೂ ಸಂಬಂಧವಿದೆ. ಆದರೆ ಡೆಪ್ಯುಟಿ ಕಮಿಷನರ್ ಟ್ರಾಫಿಕ್‌ಗೂ ಈ ಕೇಸಿಗೂ ಏನು ಸಂಬಂಧವಿದೆ ? ಇದು ಯೋಚನೆ ಮಾಡಬೇಕಾದಂಥ ವಿಷಯ. ಇನ್ನು ತಾರೀಖು ೧೫ನೇ ಫೆಬ್ರವರಿ ೧೯೭೫ರಲ್ಲಿ ಅವರನ್ನು ಈ ಸುರೇಶ್ ಶೆಟ್ಟಿ ಮತ್ತು ಇತರರು ಹೊಡೆದಿದ್ದಾರೆ, ಇದಕ್ಕಾಗಿ ನಾನು ಹೇಳುತ್ತಿದ್ದೇನೆ. ಇದೇ ತಿಂಗಳು 6ನೇ ತಾರೀಖಿನ ದಿವಸ ರಾತ್ರಿ ಅವರು ಮನೆಯಲ್ಲಿ ಇದ್ದಾಗ ಅವರ ಮನೆಯವರು ಎಲ್ಲಾ ಒಂದು ಪಂಕ್ಷನ್‌ಗೆ ರವೀಂದ್ರ ಕಲಾಕ್ಷೇತ್ರಕ್ಕೆ ಹೋಗಿದ್ದಾಗ ೮-೧೦ ಗೂಂಡಾಗಳು ಬಂದು ಮಾನ್ಯ ರಂಗಸ್ವಾಮಿಯವರನ್ನು ಹೊಡೆಯುತ್ತಿದ್ದಾಗ ಅವರ ಬ್ರದರ್ಸ್ ಬಂದು ಆ ಗೂಂಡಾಗಳನ್ನು ಹಿಡಿದುಬಿಟ್ಟಿದ್ದಾರೆ ಜೊತೆಗೆ ಅವರನ್ನು ಪೋಲೀಸ್‌ಗೆ ಕೊಟ್ಟಿದ್ದಾರೆ. ಇದರಿಂದ ಸುರೇಶ್ ಶೆಟ್ಟಿ ಏನು ಇದ್ದಾರೆ ಇವರಿಗೂ ಡೆಪ್ಯುಟಿ ಕಮಿಷನರ್, ಪೋಲೀಸ್ ಟ್ರಾಫಿಕ್‌ಗೂ ಏನು ಸಂಬಂಧ ? ಇವರಿಗೆ ಇಷ್ಟು ಬೆಂಬಲ ಕೊಡಲು ಕಾರಣವೇನು ? ಈ ಸುರೇಶ್ ಶೆಟ್ಟಿಯವರ ಮನೆಯ ಹತ್ತಿರ ಪೋಲೀಸರನ್ನು ಯಾವಾಗಲೂ ಕಾವಲು ಹಾಕಿದ್ದಾರಂತೆ. ಇದೇ ರೀತಿ ಬೇರೆ ಎಲ್ಲಿಯಾದರೂ, ಮನೆಯವರಿಗೂ ಮತ್ತು ಬಾಡಿಗೆಯವರಿಗೂ ಜಗಳವಿದ್ದರೆ ಸರ್ಕಾರದವರು ಪೋಲೀಸರನ್ನು ಕಾವಲು ಹಾಕಿ ರಕ್ಷಣೆ ಕೊಡುತ್ತಾರೆಯೇ ? ಯಾರಿಗೆ ರಕ್ಷಣೆ ಕೊಡಬೇಕೋ ಕೊಟ್ಟಿಲ್ಲ. ಪೋಲೀಸರು ತಮ್ಮ ಕರ್ತವ್ಯದಲ್ಲಿ ಫೇಲ್ ಆಗಿದ್ದಾರೆ. ಮಾನ್ಯ ರಂಗಸ್ವಾಮಿಯವರಿಗೆ ರಕ್ಷಣೆ ಕೊಟ್ಟಿಲ್ಲ. ಇವರು ಯಾರನ್ನು ಹಿಡಿದು ಪೋಲೀಸಿಗೆ ಕೊಟ್ಟರೋ, ಅವರ ಮೇಲೆ ಯಾವರೀತಿ ಕೇಸ್ ರಿಜಿಸ್ಟರ್ ಮಾಡದೆ ಇರುವುದನ್ನು ನೋಡಿದರೆ ಹನುಮಂತನಗರ ಪೋಲೀಸ್ ಸ್ಟೇಷನ್‌ನವರು ಏನುಮಾಡುತ್ತಿದ್ದಾರೆ. ಎಂದು ಕೇಳಬೇಕಾಗುತ್ತದೆ ಆದ್ದರಿಂದ ನಾನು ಕೇಳುವುದು ಮೊದಲು ರಂಗಸ್ವಾಮಿಯವರಿಗೆ ರಕ್ಷಣೆ ಕೊಡಬೇಕೆಂದು. ಮಾನ್ಯ ರಂಗಸ್ವಾಮಿಯವರು ಎಲ್ಲಾ ರೀತಿಯ ಪ್ರಿಕಾಷನರಿ ಕ್ರಮಗಳನ್ನು ತೆಗೆದು ಕೊಂಡಿದ್ದರೂ ಕೂಡ ಅವರಿಗೆ ರಕ್ಷಣೆ ಕೊಟ್ಟಿಲ್ಲ. ಮೊದಲು ರಂಗಸ್ವಾಮಿಯವರು, ಐ.ಜಿ.ಪಿ. ಮತ್ತು ಡೆಪ್ಯುಟಿ ಕಮಿಷನರ್ ಆಫ್ ಪೋಲೀಸ್ ಮತ್ತು ಸಂಬಂಧಪಟ್ಟ ಪೋಲೀಸ್ ಸ್ಟೇಷನ್‌ಗೂ ಬರೆದುಕೊಟ್ಟಿದ್ದಾರೆ ಇಷ್ಟಾದರೂ ಅವರಿಗೆ ರಕ್ಷಣೆಯಿಲ್ಲ ಎಂದರೆ ಇದಕ್ಕೆ ಸಮ್ಮ ಡೆಪ್ಯುಟಿ ಕಮಿಷನರ್ ಆಫ್ ಟ್ರಾಫಿಕ್ ಅವರ ಪ್ರಭಾವ ಇದೆ ಎಂದು ಹೇಳಬೇಕಾಗುತ್ತದೆ ಇದರ ಬಗ್ಗೆ ಡಾಕ್ಯುಮೆಂಟ್ಸ್ ರುಜುವಾತು ಮಾಡುವುದಕ್ಕೆ ತಯಾರಿದ್ದೇನೆ. ಆದ್ದರಿಂದ ಸರ್ಕಾರದವರು ದಿನಪೂ ನಡೆಯುತ್ತಿರುವ ಈ ಕೇಸಿನ ಬಗ್ಗೆ ಸರ್ಕಾರದ ಪರವಿಂದ, ಇದಕ್ಕೆ ಯಾರು ಯಾರು ಸಂಬಂಧಪಟ್ಟಿದ್ದಾರೆ ಅದನ್ನು ಸರಿಯಾಗಿ ವಿಚಾರಮಾಡಿ ಸೂಕ್ತ ಕ್ರಮ ತೆಗೆದುಕೊಂಡು ಮಾನ್ಯ ರಂಗಸ್ವಾಮಿಯವರಿಗೆ ರಕ್ಷಣೆ ಕೊಡಬೇಕೆಂದು ಹೇಳುತ್ತೇನೆ. ಜೊತೆಗೆ ಯಾರನ್ನು ಅರೆಸ್ಟ್ ಮಾಡಿದ್ದರೋ ಅವರನ್ನು ಬೇಲ್ ಮೇಲೆ ರೀಲೀಸ್ ಮಾಡಿದ್ದಾರೆಂದು ನಾನು ಕೇಳಲ್ಪಟ್ಟಿದ್ದೇನೆ. ಇವರ ಮೇಲೆ ಯಾವರೀತಿಯಾದ ಕೇಸನ್ನು ರಿಜಿಸ್ಟರ್ ಮಾಡಿಲ್ಲವೆಂದರೆ ಇದರಿಂದ ಏನು ಅರ್ಥವಾಗುತ್ತದೆ ಎಂದು ಸರ್ಕಾರ ಯೋಚನೆ ಮಾಡಬೇಕು.

ಅಧ್ಯಕ್ಷರು.—ಹೀಗೆ ೧೫ ನಿಮಿಷ ಭಾಷಣ ಮಾಡಿದರೆ ಯಾರು ಜವಾಬ್ದಾರರು ?

ಶ್ರೀ ಎಸ್ ಬಂಗಾರಪ್ಪ.—ನಾನು ಕೇಳುವುದು ಸರ್ಕಾರದವರು ರಕ್ಷಣೆ ಕೊಡುತ್ತೇವೆಂದು ಹೇಳಲಿ ಅಷ್ಟೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಹೇಳಿದ್ದನ್ನು ಕೇಳಿದ್ದೇವೆ. ದಯವಿಟ್ಟು ತಮ್ಮಲ್ಲಿರುವ ಮಾಹಿತಿಯನ್ನು ಕಳುಹಿಸಿಕೊಡಿ. ಸರ್ಕಾರ ಇದರ ಬಗ್ಗೆ ಕೂಡಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಡೆಪ್ಯುಟಿ ಕಮಿಷನರ್ ಆಫ್ ಪೋಲೀಸ್ ಟ್ರಾಫಿಕ್ ಅನಾವಶ್ಯಕವಾಗಿ ಶ್ರೀ ಮಾನ್ ರಂಗಸ್ವಾಮಿಯವರನ್ನು ಅವರ ಆಫೀಸಿಗೆ ಕರೆಸಿದಾರೆ. ಬೇಕಾದರೆ ಪೋಲೀಸ್ ಸ್ಟೇಷನ್‌ಗೆ ಕರೆಸಲಿ ವಿಚಾರಿಸಲಿ ಇವರ ಆಫೀಸಿಗೆ ಕರೆಸುವುದಕ್ಕೆ ಕಾರಣವೇನು ?

SRI H. M. CHANNABASAPPA.—Hon. Members have said so many things. We have heard them. The Hon. Speaker will be sending their letter to us and we will take such urgent action as may be necessary.

L. A.